3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್ ಸಿ, ಮಂಗಳೂರು, ದ.ಕ,

ದಿಃ 12.03.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಎದುರುದಾರ ಪರ ಶ್ರೀ K B R ವಕೀಲರಿಂದ,

1. ಅರ್ಜಿಯನ್ನು ಯಾವ ಕಾರಣಕ್ಕೆ ಸಲ್ಲಿಸಿದ್ದೇನೆ ಎಂದು ಗೊತ್ತಿದೆ . ನನ್ನ ದೊಡ್ಡಮ್ಮ ನ ಮಗ ನನಗೆ ಪಾಲು ಕೊಡುವುದಾಗಿ ಹೇಳಿದ್ದರು . ಪಾಲು ನೀಡದೇ ಅವರು ಮೃತರಾಗಿದ್ದಾರೆ . ಪಾಲನ್ನು ಕೋರಿ ಅರ್ಜಿ ಹಾಕಿದ್ದೇನೆ .O S No.224/2014 ವಜಾ ಆದ ಬಗ್ಗೆ ಗೊತ್ತಾದ ದಿನಾಂಕ ಈಗ ಗೊತ್ತಾಗುತ್ತಿಲ್ಲ . ಯಾವ ತಿಂಗಳು ಅಥವಾ ವರ್ಷದಲ್ಲಿ ದಾವಾ ವಜಾ ಆದ ವಿಚಾರ ನನಗೆ ತಿಳಿಯಿತು ಎಂದು ಹೇಳಲು ಗೊತ್ತಾಗುವುದಿಲ್ಲ .

2. ನಿಪಿ 2 ದಾಖಲೆ ನನಗೆ ಯಾವಾಗ ಸಿಕ್ಕಿತು ಎಂದು ಹೇಳಲು ನೆನಪಾಗುತಿಲ್ಲ . ನಿಪಿ 3 ದಾಖಲೆಯನ್ನು ನೋಡಿ ಸಾಕ್ಷಿಯು ಅದನ್ನು 2021 ನೇ ಇಸವಿಯಲ್ಲಿ ಪಡೆದಿರುವುದಾಗಿ

ನುಡಿಯುತ್ತಾರೆ . ನಾನು ಯಾವ ತಿಂಗಳು ಅಥವಾ ವರ್ಷದಲ್ಲಿ ಅನಾರೋಗ್ಯಕ್ಕೆ ತುತ್ತಾಗಿದ್ದೆ ಎಂದು ಹೇಳಲು ಗೊತ್ತಾಗುವುದಿಲ್ಲ . ನಿಪಿ 2 ಮತ್ತು 3 ದಾಖಲೆಗಳು ಈ ಕೇಸಿನ ಸಲುವಾಗಿ ಸೃಷಿಸಿರುವ ದಾಖಲೆ ಎನ್ನುವುದು ಸರಿಯಲ್ಲ . ನನಗೆ ದಮ್ಮು ಕಟ್ಟುತ್ತದೆ ,ಬಿದ್ದು ಕಾಲು ನೋವಾಗಿದೆ , ಎರಡು ಕಣ್ಣುಗಳ ಶಸ್ತ್ರ ಚಿಕಿತ್ಸೆ ಆಗಿದೆ . ಕಣ್ಣುಗಳ ಶಸ್ತ್ರ ಚಿಕಿತ್ಸೆಯನ್ನು ಮಂಗಳೂರಿನ ಎನಪೋಯಾ ಆಸ್ಪತ್ರೆಯ ಪ್ರಸಾದ್ ಡಾಕ್ಟರ್ ಮಾಡಿದ್ದಾರೆ . ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ . ನಾನು ಯಾವುದೇ ಚಿಕಿತ್ಸೆ ಪಡೆದಿಲ್ಲ ಎನ್ನುವುದು ಸರಿಯಲ್ಲ .

3. O S No.224/2014 ರ ಪ್ರತಿವಾದಿ 27 ರಿಂದ 29 ರವರು ನಮ್ಮ ಕುಟುಂಬದವರು ಮತ್ತು ಚಿಕ್ಕಮ್ಮ ನ ಮಕ್ಕಳು . ಸದರಿ ವ್ಯಕ್ತಿಗಳನ್ನು ಈ ಅರ್ಜಿಯಲ್ಲಿ ಉದ್ದೇಶ ಪೂರ್ವಕವಾಗಿ ಪಾರ್ಟಿ ಗಳಾಗಿ ಮಾಡಿಲ್ಲ ಎನ್ನುವುದು ಸರಿಯಲ್ಲ . O S No.224/2014 ವಜಾ ಆದ ಕಾಲಕ್ಕೆ ನ್ಯಾಯಾಲಯಕ್ಕೆ ಹಾಜರಾಗಲು ನನಗೆ ಯಾವುದೇ ರೀತಿಯ ತೊಂದರೆ ಇರಲಿಲ್ಲ ಎನ್ನುವುದು ಸರಿಯಲ್ಲ .

ಪಾಟೀ ಸವಾಲುಃ ಎದುರುದಾರ 13,15 ರಿಂದ 25 – ಸದರಿಯವರ ಪರವಾಗಿ ಈ ಸಾಕ್ಷಿದಾರರ ಪಾಟಿ ಸವಾಲು ಇರುವುದಿಲ್ಲ ಅವರ ಪರ ವಕೀಲರು ತಿಳಿಸಿರುತ್ತಾರೆ .

ಮರು ವಿಚಾರಣೆ ಇಲ್ಲ.

ನನ್ನ ಹೇಳಿಕೆ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

3 ನೇ ಹೆ. ಸಿ. ನ್ಯಾ ಮತ್ತು ಜೆಎಂ ಎಫ್.ಸಿ.,
ಮಂಗಳೂರು.